# ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮುಂಡರಗಿ

| | |
|---|---|
| ಓ. ಎಸ್. ನಂ. | 42/2018 |
| ಪಿ. ಡಬ್ಲ್ಯೂಃ | 1 |
| ದಿನಾಂಕಃ | 29-03-2021 |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.
ಪಾಟೀ ಸವಾಲುಃ ಶ್ರೀ. ಜಿ. ಎಂ. ಕೆ. ವಕೀಲರಿಂದಃ

1. ನಾನು 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು 9 ಜನರ ಮೇಲೆ ದಾವೆ ದಾಖಲಿಸಿರುತ್ತೇನೆ. ದಾವೆಯನ್ನು ನಮ್ಮ ಜಮೀನಿನಗೋಸ್ಕರ ಹಾಕಿರುತ್ತೇನೆ. ನಮ್ಮ ಜಮೀನಿನ ಸರ್ವೆ ನಂ. 2/2 ಎಂದು ಇರುತ್ತದೆ. ಅದರ ಕ್ಷೇತ್ರ 14 ಎಕರೆ 28 ಗುಂಟೆ ಇರುತ್ತದೆ. ದಾವಾ ಆಸ್ತಿಯ ಮೂಲ ಮಾಲಿಕರು ನಾವೇ ಇರುತ್ತೇವೆ. ದಾವಾ ಆಸ್ತಿ ನಮ್ಮ ತಂದೆಯ ಮೂಲಕ ನಮಗೆ ಬಂದಿರುತ್ತದೆ. ದಾವಾ ಆಸ್ತಿ ಮುಂಚೆ ಬಿಂದಿಗಿ ಎನ್ನುವವರ ಮಾಲಿಕತ್ವದಲ್ಲಿತ್ತು. ಬಿಂದಿಗಿಯವರು ಮುಂಚೆ ಅಪರಂಜಿ ಎಂಬ ಮನೆತನಕ್ಕೆ ಸೇರಿದವರು ಆಗಿದ್ದರು. ದಾವಾ ಆಸ್ತಿ 1) ಹನಮಪ್ಪ, 2) ಬಾಳಪ್ಪ, 3) ಭೀರಪ್ಪ ತಂದೆ ಶಿದಪ್ಪ ಹ್ಯಾಟಿ ಎನ್ನುವವರಿಗೆ ಸೇರಿದ್ದು ಇರುತ್ತದೆ. ದಾವಾ ಆಸ್ತಿ ಭೂನ್ಯಾಯಾಲಯ ಮಂಡಳಿಯಿಂದ ಮಂಜೂರಾದ ಆಸ್ತಿಯಾಗಿರುತ್ತದೆ. ಸುಮಾರು 25 ವರ್ಷಗಳ ಹಿಂದೆ ಸದರಿ ಆಸ್ತಿ ಮಂಜೂರಾಗಿರುತ್ತದೆ. ದಾವಾ ಆಸ್ತಿ ಮಂಜೂರು ಆದ ಸಮಯದಲ್ಲಿ ವಿಸ್ತೀರ್ಣ 16 ಎಕರೆ 28 ಗುಂಟೆ ಇತ್ತು.

2. ಭೂನ್ಯಾಯಮಂಡಳಿಯ ಆದೇಶದ ಪ್ರತಿಯನ್ನು ಈ ದಾವೆಯಲ್ಲಿ ಹಾಜರುಪಡಿಸಿರುತ್ತೇವೆ. ಸದರಿ ಆಸ್ತಿ ಪೈಕಿ ಸ್ವಲ್ಪ ಭಾಗವನ್ನು ಶಾಲೆಗೆ, ದವಾಖಾನೆಗೆ, ಪಂಚಾಯತಿಯವರಿಗೆ ನೀಡಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇವೆ. 20 ನೇ ಪ್ರತಿವಾದಿ ರಾಧಾಬಾಯಿ ಬಿಂದಿಗಿ ಇವರ ಪರಿಚಯ ಇದೆ. ರಾದಾಬಾಯಿಗೆ ಆಸ್ತಿ ಹೇಗೆ ಬಂದು ಎಂದು ನನಗೆ ಹೇಳಲಾಗುವುದಿಲ್ಲಾ. ಭೂನ್ಯಾಯ ಮಂಡಳಿದಯಿಂದ ಮಂಜೂರಾದ ಆಸ್ತಿಯ ಪೈಕಿ ಸ್ವಲ್ಪ ಭಾಗವನ್ನು ನಾವು ಶಾಲೆಗೆ, ದವಾಖಾನೆಗೆ ಇತ್ಯಾದಿ ನೀಡಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. 20 ನೇ ಪ್ರತಿವಾದಿಯ ತಂದೆ ತಾಯಿ ಆ ರೀತಿ ಆಸ್ತಿಯನ್ನು ದಾನವಾಗಿ ನೀಡಿದ್ದಾರೆ ಎಂದರೆ ಸರಿ ಅಲ್ಲ.

3. ನಾವು ಹಾಲಶಿವಯೋಗೇಶ್ವರ ಪೌಡ್ರ ಶಾಲೆಗೆ 3 ಎಕರೆ 5 ಗುಂಟೆ ದಾನ ನೀಡಿರುತ್ತೇವೆ. ದವಾಖಾನೆಗೆ ಅಪರಂಜಿ ಮನೆತನದವರು ಆಸ್ತಿಯನ್ನು ದಾನವಾಗಿ ನೀಡಿರುತ್ತಾರೆ. ಆಶ್ರಯಯೋಜನೆ ಅಡಿ ಮನೆಗಳಿಗೆ ಅಪರಂಜಿ ಮನೆತನದವರು ಆಸ್ತಿಯನ್ನು ದಾನವಾಗಿ ನೀಡಿರುತ್ತಾರೆ. ಅವರು ಆಶ್ರಯ ಯೋಜನೆಯ 14 ಎಕರೆ ಜಮೀನನ್ನು ದಾನವಾಗಿ ನೀಡಿರುತ್ತಾರೆ. ನಾವು ಶಾಲೆಗೆ ಆಸ್ತಿಯನ್ನು ದಾನವಾಗಿ ನೀಡಿದ ಬಗ್ಗೆ ದಾಖಲೆಯನ್ನು ಈ ದಾವೆಯಲ್ಲಿ ಹಾಜರುಪಡಿಸಿರುತ್ತೇವೆ.

4. ದವಾಖಾನೆಗೆ, ಆಶ್ರಯ ಯೋಜನೆಗೆ, ಹಾಗೂ ಹಾಲಶಿವಯೋಗೇಶ್ವರ ಶಾಲೆಗೆ ನೀಡಿದ ಆಸ್ತಿ ಅಪರಂಜಿ ಮನೆತನಕ್ಕೆ ಸೇರಿದ ಆಸ್ತಿ ಎಂದರೆ ನಿಜ. ಆಶ್ರಯ ಯೋಜನೆ ಅಡಿ ಸುಮಾರು 200 ಮನೆಗಳನ್ನು ಧಾನ ಕೊಟ್ಟ ಆಸ್ತಿಯಲ್ಲಿ ಕಟ್ಟಲಾಗಿದೆ. ಸುಮಾರು 8-10 ವರ್ಷಗಳಿಂದ ಸದರಿ ಮನೆಗಳನ್ನು ಕಟ್ಟಲಾಗಿದೆ. ನಮ್ಮ ಆಸ್ತಿಯಲ್ಲಿ ಯಾವುದೇ ರಸ್ತೆ ಹಾಯ್ದು ಹೋಗಿಲ್ಲಾ ಎಂದರೆ ಸರಿ ಅಲ್ಲ. ಸದರಿ ರಸ್ತೆ ಅಪರಂಜಿ ಎನ್ನುವವರ ಆಸ್ತಿಯಲ್ಲಿ ಹಾಯ್ದು ಹೋಗಿದೆ ಎಂದರೆ ಸರಿ ಅಲ್ಲ. ಆಶ್ರಯ ಯೊೀಜನೆ ಅಡಿ ಮಂಜೂರಾದ ಮನೆಗಳ ವಿಪಿಸಿನಂ. ನನಗೆ ಹೇಳಲಾಗುವುದಿಲ್ಲ.

5. ದಾವಾ ಆಸ್ತಿಯ ಪೈಕಿ 10 ಎಕರೆ 35 ಗುಂಟೆ ಆಸ್ತಿಯನ್ನು ಸರಕಾರದವರು ಭೂ ಸ್ವಾಧಿನಕೊಡಿಸಿಕೊಂಡ ಬಗ್ಗೆ ನಿಪಿಃ 2 ರಂತೆ ಡ. ಸೇ. ನಂ. ಮಂಜೂರಾಗಿದೆ ಎಂದರೆ ನಿಜ. ಆ ಪ್ರಕಾರ 10 ಎಕರೆ 35 ಗುಂಟೆ ಆಸ್ತಿಗೆ ಸರ್ವೆನಂ. 2/2ಎ ಎಂದು ನಂಬರ ನೀಡಲಾಯಿತು ಎಂದರೆ ನಿಜ. ಸದರಿ ಭೂ ಸ್ವಾಧೀನ ಪ್ರಕ್ರಿಯೇ ಪ್ರಕಾರ ಸರಕಾರದವರು ನಿಪಿಃ 3 ರಂತೆ ಅದರ ಸ್ವಾಧೀನತೆ ಪಡೆದುಕೊಂಡಿರುತ್ತಾರೆ ಎಂದರೆ ನಿಜ. ಆ ರೀತಿ ಭೂಸ್ವಾಧೀನಗೊಂಡು ಉಳಿದ ಜಮೀನು ಯಾರ ಯಾರ ಪಾಲಿಗೆ ಎಷ್ಟು ಎಷ್ಟು ಎಂದು ನಿಪಿಃ 5 ರ ಪ್ರಕಾರ ಡ.ಸೇ. ಮಂಜೂರು ಆಗಿದೆ ಎಂದರೆ ನಿಜ.ನಿಪಿಃ 5 ರ ಪ್ರಕಾರ ನಮ್ಮ ಪಾಲಿಗೆ 2 ಎಕರೆ 28 ಗುಂಟೆ ಪಿ.ಕೆ. 1 ಗುಂಟೆ ಜಮೀನು ಮಾತ್ರ ಉಳಿದಿದೆ ಎಂದರೆ ನಿಜ ನಮಗೆ ಸರ್ವೆನಂ. 2/2ರಲ್ಲಿ 2 ಎಕರೆ 27 ಗುಂಟೆ ಜಮೀನು ಮಾತ್ರ ಭೂನ್ಯಾಯ ಮಂಡಳಿಯಿಂದ ಮಂಜೂರು ಆಗಿದೆ ಎಂದರೆ ನಿಜ. ಉಳಿದ ಜಮೀನನ್ನು 20ನೇ ಪ್ರತಿವಾದಿ ಪಂಚಾಯತಿಯವರಿಗೆ, ಶಾಲೆಗೆ, ದವಾಖಾನೆಗೆ, ಧಾನವಾಗಿ ನೀಡಿರುತ್ತಾರೆ ಎಂದರೆ ನಿಜ. ನಮಗೆ ಮಂಜೂರಾಡಿದ 2 ಎಕರೆ 27 ಗುಂಟೆ ಜಮೀನು ನಾವು ಸ್ವಾಧೀನತೆ ಹೊಂದಿದದ್ದರು ಸಹ ಅದನ್ನು ಪ್ರತಿವಾದಿಯರು ಅತೀಕ್ರಮಣ ಮಾಡಿರುವುದಾಗಿ ಸುಳ್ಳು ದಾವೆ ದಾಖಲಿಸಿದ್ದೇವೆ ಎಂದರೆ ಸರಿ ಅಲ್ಲ.

ನಮ್ಮ ಜಮೀನು 2 ಎಕರೆ 27 ಗುಂಟೆ ಕ್ಷೇತ್ರವನ್ನು ಭೂ ಮಾಪಕರಿಂದ ಅಳತೆ ಮಾಡಿಸಿರುತ್ತೇವೆ. ಭೂಮಾಪನಾಧಿಕಾರಿಗಳು ನಮ್ಮ ಜಮೀನಿನ ಪೈಕಿ ಎಷ್ಟು ಕ್ಷೇತ್ರವನ್ನು ಪ್ರತಿವಾದಿಯರು ಅತೀಕ್ರಮಣ ಮಾಡಿರುತ್ತಾರೆ ಎಂದು ತೋರಿಸಿರುವುದಿಲ್ಲಾ. ಭೂಮಾಪಕರು ಭೂಮಾಪನಾ ಮಾಡಿ ನೀಡಿದ ನಕ್ಷೆಯನ್ನು ಈ ದಾವೆಯಲ್ಲಿ ಹಾಜರುಪಡಿಸಿರುತ್ತೇವೆ. ನಾವು ಭೂಮಾಪಕರಿಂದ ಅಳತೆ ಮಾಡಿಸಿರುವುದಿಲ್ಲ, ಯಾವುದೇ ನಕ್ಷೆಯನ್ನು ಪಡೆದುಕೊಂಡು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲಾ ಎಂದರೆ ಸರಿ ಅಲ್ಲ. ದಾವಾ ಆಸ್ತಿಗೂ ಹಾಗೂ 1 ರಿಂದ 19 ನೇ ಪ್ರತಿವಾದಿಯರಿಗೆ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿ ಅಲ್ಲ.

6. 1 ರಿಂದ 19 ನೇಪ್ರತಿವಾದಿಯರ ಮನೆಗಳ ವಿಪಿಸಿನಂಬರಗಳನ್ನು ನನಗೆ ಹೇಳಲಾಗುವುದಿಲ್ಲ. ನನಗೆ ಈ ದಾವೆಯ ಬಗ್ಗೆ ಮಾಹಿತಿ ಇಲ್ಲದಿದ್ದರೂ ಸುಳ್ಳು ಸಂಗತಿಗಳನ್ನು ನಮೂದಿಸಿ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಎಂದರೆ ಸರಿ ಅಲ್ಲ ದಾವಾ ಆಸ್ತಿಯ ಚಕ್ಕಬಂದಿ ಹೇಳಬಲ್ಲೆ. ದಾವಾ ಆಸ್ತಿಯ ಪೂರ್ವಕ್ಕೆ –ಹಳ್ಳಿಗುಡಿ ರಸ್ತೆ ಇದೆ. ಪಶ್ಚಿಮಕ್ಕೆ– ಅಪರಂಜಿಯವರು ಜಮೀನು. ಉತ್ತರಕ್ಕೆ–ದೊಡ್ಡಹೊನ್ನಪ್ಪಗೌಡ ಇವರ ಮನೆ ಇದೆ. ದಕ್ಷಿಣಕ್ಕೆ–ರಸ್ತೆ ಇದೆ.

7. ದಾವಾ ಆಸ್ತಿ ಮಂಜೂರಾದ ನಂತರ ಅದರ ದಾಖಲೆಗಳಿಗೆ ಈಗ 1, 4, 7 ರಿಂದ 10 ಹಾಗೂ ನನ್ನ ಹೆಸರು ದಾಖಲು ಆಗಿವೆ. ಅದೇ ರೀತಿ ನನ್ನ ತಾಯಿ ಕಾಳವ್ವನ ಹೆಸರು ಸಹ ದಾಖಲು ಇದೆ. ದಾವಾ ಆಸ್ತಿಯನ್ನು ನಾವು ವಿಭಾಗ ಮಾಡಿಕೊಂಡಿರುವುದಿಲ್ಲಾ. ಎಲ್ಲರೂ ಒಟ್ಟಿಗೆ ಸಾಗುವಳಿ ಮಾಡುತ್ತೇವೆ. ದಾವಾ ಆಸ್ತಿಯ ಕಂದಾಯವನ್ನು ನಾವೇ ಪಾವತಿಸುತ್ತಿದ್ದೇವೆ. ಕಂದಾಯ ಪಾವತಿಸಿದ ರಶೀದಿಗಳನ್ನು ಹಾಜರುಪಡಿಸಿರುತ್ತೇವೆ.ದಾವಾ ಆಸ್ತಿ ಕ್ಷೇತ್ರ 2 ಎಕರೆ 27 ಗುಂಟೆ ನಮ್ಮ ಸ್ವಾಧೀನತೆಯಲ್ಲಿದ್ದರೂ ಸಹ 1 ರಿಂದ 19 ನೇ ಪ್ರತಿವಾದಿಯ ಅತೀ ಕ್ರಮಣ ಮಾಡಿರುವುದಾಗಿ ಅವರ ವಿರುದ್ದ ಸುಳ್ಳು ದಾವೆ ದಾಖಲಿಸಿದ್ದೇವೆ ಎಂದರೆ ಸರಿ ಅಲ್ಲ. ಆಶ್ರಯ ಯೋಜನೆ ಅಡಿ ಮಂಜೂರಾದ ಮನೆಗಳಿಗೆ ಮಾಲಿಕರ ಹೆಸರುಗಳು ದಾಖಲಾದ ಬಗ್ಗೆ ನನಗೆ ಗೊತ್ತಿಲ್ಲಾ. ಕೆಲವೂ ಫಲಾನುಭವಿಗಳು 20 ನೇ ಪ್ರತಿವಾದಿಗೆ ಪ್ರತಿಫಲ ನೀಡಿ ನೋಂದಾಯಿತ ದಾಖಲೆಯ ಪ್ರಕಾರ ತಮ್ಮ ಹೆಸರುಗಳನ್ನು ದಾಖಲಿಸಿಕೊಂಡು ಸರಕಾರದ ಯೋಜನೆ ಅಡಿ ಮನೆಗಳನ್ನು ನಿರ್ಮಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲಾ.

ಮರು ವಿಚಾರಣೆ ಇರುವುದಿಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ಮುಂಡರಗಿ.